

**ಕಳೆದ ವರ್ಷದ ವಿದ್ಯಮಾನವನ್ನು ಅವಲೋಕಿಸಿದರೆ ಇಸ್ರೇಲ್ ಮತ್ತು ಹಮಾಸ್, ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷ ವಿಶ್ವದಾದ್ಯಂತ ಆರ್ಥಿಕ ಬಿಕ್ಕಟ್ಟು ಸೃಷ್ಟಿಸಿತ್ತು. ಇದೇ ಚಿನ್ನದ ಬೆಲೆ ಏರಿಕೆಗೆ ಕಾರಣ.**




ಹೇಮ, ಬಂಗಾರ, ಹೊನ್ನು, ಹಳದಿ ಲೋಹ, ಸುವರ್ಣ, ಕನಕ... ಹೀಗೆ ಯಾವ ಹೆಸರಿನಲ್ಲಿ ಕರೆದರೂ ಅದು ಚಿನ್ನ ಚಿನ್ನವೇ. ಮಿನುಗುವ ಆಕರ್ಷಕ ಬಣ್ಣ, ಮೃದುತ್ವ ಗುಣ, ಆಭರಣಕ್ಕೆ ಅತ್ಯಂತ ಸೂಕ್ತವಾಗಿರುವ ಈ ಹಳದಿ ಲೋಹದ ಬೆಲೆ ಮಾತ್ರ ಸದಾ ಗಗನಮುಖಿ. ದಿನದಿಂದ ದಿನಕ್ಕೆ ನಾಗಾಲೋಟದಂತೆ ಏರುಮುಖವಾಗುತ್ತಿರುವ ಒಡವೆ ಚಿನ್ನದ ಬೆಲೆ ಈಗ ಒಂದು ಗ್ರಾಂಗೆ 10 ಸಾವಿರ ದಾಟಿದೆ. ಹೂಡಿಕೆದಾರರಿಗೆ ಚಿನ್ನಕ್ಕಿಂತಲೂ ಉತ್ತಮ ಆಯ್ಕೆ ಬೇರೊಂದಿಲ್ಲವಾದರೂ ಚಿನ್ನದೊಡವೆ ತಿಜೋರಿಯಲ್ಲಿರಬೇಕು, ಸಂಭ್ರಮದ ದಿನಗಳಲ್ಲಿ ಧರಿಸಬೇಕು ಎಂದು ಹಂಬಲಿಸುವ ಮಧ್ಯಮವರ್ಗಕ್ಕೆ ಚಿನ್ನ ಕೊಳ್ಳುವುದು ಮಾತ್ರ ಗಗನಕುಸುಮವಾಗಿ ಬಿಟ್ಟಿದೆ.

‘ಚಿನ್ನ ಒಂದು ರೀತಿಯ ಕರೆನ್ಸಿ. ಇದನ್ನು ಜಗತ್ತಿನ ಎಲ್ಲಿ ಬೇಕಾದರೂ ಚಲಾವಣೆ ಮಾಡಬಹುದು. ಬಂಗಾರ, ಆಪತ್ತಿನ ಕಾಲದಲ್ಲಿ ಕೈಹಿಡಿಯುವ ಆಪದ್ಧನ’ ಎನ್ನುವುದು ಅಮೆರಿಕದ ಹಣಕಾಸುದಾರ ಜೆ.ಪಿ. ಮಾರ್ಗನ್ ಅವರ ಅಭಿಪ್ರಾಯ.

ಹಿಂದೆ ಎಂದೂ ಕಂಡು ಕೇಳರಿಯದಷ್ಟರ ಮಟ್ಟಕ್ಕೆ ಚಿನ್ನದ ಬೆಲೆ ಜಿಗಿದಿದೆ. ಪ್ರತಿದಿನ ಇವತ್ತು ಚಿನ್ನದ ದರ ಎಷ್ಟು? ಎಷ್ಟು ಏರಿಕೆಯಾಗಿದೆ? ಎಷ್ಟು ಇಳಿಕೆಯಾಗಿದೆ ಎಂಬುದರತ್ತಲೇ ವಿತ್ತ ತಜ್ಞರ ಚಿತ್ತ ಹರಿದಿದೆ. ಗಳಿಕೆಯಲ್ಲಿ ಉಳಿಸಿ ಉಳಿಸಿ ಕೊಂಚವಾದರೂ ಚಿನ್ನ ಕೊಳ್ಳಬೇಕು ಎಂದು ಆಸೆಗಣ್ಣಿನಿಂದ ನೋಡುವ ಮೇಲ್ಮಧ್ಯಮ ವರ್ಗದ ಮಹಿಳೆಯರೂ ಚಿನ್ನದ ಬೆಲೆ ಏರುವುದನ್ನು ನೋಡಿ ಸುಮ್ಮನಾಗುತ್ತಿರುವುದು ಈಗಿನ ವಿದ್ಯಮಾನವೂ ಆಗಿದೆ.

ದರ ಎಷ್ಟು ಏರಿದರೂ ಮದುವೆ, ಮುಂಜಿ ಸಮಯದಲ್ಲಿ ನಮ್ಮ ಬಳಿಗೆ ಗ್ರಾಹಕರು ಬಂದೇ ಬರುತ್ತಾರೆ, ಲಾಭದ ಗಂಟನ್ನು ತುಂಬಿಸಿಕೊಳ್ಳಲು ಇದೇ ಸಕಾಲ ಎಂದು ಹೊಂಚುಹಾಕುವ ವರ್ತಕರು ಬೆಲೆ ಏರಿಕೆಯನ್ನು ಗಣನೆಗೆ ತೆಗೆದುಕೊಳ್ಳದೆ ವ್ಯಾಪಾರ ವಹಿವಾಟಿನತ್ತ ಮುಖ ಮಾಡಿದ್ದಾರೆ. ಆದರೆ ಯಾರೂ ಊಹಿಸಲಾಗದ ಮಟ್ಟಿಗೆ ಚಿನ್ನದ ದರ ದುಬಾರಿಯಾಗಿರುವುದು ಮಾತ್ರ ಅರ್ಥವ್ಯವಸ್ಥೆಯಲ್ಲಿ ದೊಡ್ಡ ಸುದ್ದಿಯಾಗಲು ಕಾರಣವಾಗಿದೆ.

## ಚಿನ್ನದ ಬೆಲೆ ಏರಿಕೆಗೆ ಏನು ಕಾರಣ?

ಜಾಗತಿಕ ವಿದ್ಯಮಾನದಲ್ಲಿ ಚಿನ್ನದ ಬೆಲೆಯೇರಿಕೆಯದ್ದೇ ಈಗ ದೊಡ್ಡ ಸುದ್ದಿ. ಭಾರತದ ಮೇಲೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರತಿ ಸುಂಕ ಹೇರಿಕೆ ಮಾಡಿದ ಬಳಿಕ ಇಡೀ ಜಗತ್ತಿನ ವಹಿವಾಟಿನಲ್ಲಿ ಭಾರೀ ಏರುಪೇರು ಉಂಟಾಗಿದೆ. ಇದು ಚಿನ್ನದ ಬೆಲೆ ಏರಿಕೆ ವಿಷಯದಲ್ಲಿಯೂ ನಿಜವೆನಿಸಿದೆ. ಭಾರತದಲ್ಲಿ ಒಡವೆ ಚಿನ್ನಕ್ಕೆ ಬೇಡಿಕೆ ಹೆಚ್ಚು. ಹೀಗಾಗಿ ಚಿನ್ನದ ಆಮದು ಅನಿವಾರ್ಯ. ಜಾಗತಿಕ ಮಟ್ಟದಲ್ಲಿ ನೋಡಿದರೆ ಬಂಗಾರವನ್ನು ಬಳಸುವುದರಲ್ಲಿ ಚೀನಾಕ್ಕೆ ಮೊದಲ ಸ್ಥಾನ. ಭಾರತಕ್ಕೆ ಎರಡನೇ ಸ್ಥಾನ. ನಮ್ಮ ಜನರ ಚಿನ್ನದೊಡವೆ ಆಸೆ ಪೂರೈಸಲು ನಮ್ಮ ಉತ್ಪಾದನೆಯಿಂದ ಅಸಾಧ್ಯ.

ಜಾಗತಿಕವಾಗಿ ಷೇರುಪೇಟೆಯಲ್ಲಿ ಹಣದ ಮೌಲ್ಯ ಕುಸಿಯುತ್ತಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿಯೂ ಡಾಲರ್ ಎದುರು ರೂಪಾಯಿ ಮೌಲ್ಯವು ಗಣನೀಯವಾಗಿ ಇಳಿಕೆಯಾಗಿದೆ. ಅಮೆರಿಕದ ಸುಂಕ ಹೆಚ್ಚಳದ ನಿರ್ಧಾರವು ಕೂಡ ಚಿನ್ನದ ದರ ಏರಿಕೆಗೆ ಕಾರಣವಾಗಿದೆ ಎಂಬುದು ಚಿನ್ನದ ಬೆಲೆಯ ಗ್ರಾಫ್ ಏರುತ್ತಲೇ ಹೋಗಲು ಕಾರಣ. ಪ್ರಸಕ್ತ ವರ್ಷದ ಜನವರಿಯಿಂದ ಇಲ್ಲಿಯವರೆಗೆ ಹಳದಿ ಲೋಹದ ಬೆಲೆಯಲ್ಲಿ ಶೇ. 14ರಷ್ಟು ಹೆಚ್ಚಳವಾಗಿದೆ ಎಂಬುದನ್ನು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ಖಚಿತಪಡಿಸಿದೆ.

ಕಳೆದ ವರ್ಷದ ವಿದ್ಯಮಾನವನ್ನು ಅವಲೋಕಿಸಿದರೆ ಇಸ್ರೇಲ್ ಮತ್ತು ಹಮಾಸ್, ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷ ವಿಶ್ವದಾದ್ಯಂತ ಆರ್ಥಿಕ ಬಿಕ್ಕಟ್ಟು ಸೃಷ್ಟಿಸಿತ್ತು. ಈ ಸಮರವೂ ಚಿನ್ನದ ಧಾರಣೆ ಏರಿಕೆಗೆ ಕಾರಣವಾಗಿದೆ. ಈ ಸುಂಕ ಸಮರದಿಂದಾಗಿ ಜಾಗತಿಕ ಷೇರುಪೇಟೆಗಳು ಇಳಿಕೆ ಕಾಣುತ್ತಿವೆ. ಹಲವು ದೇಶಗಳ ಆರ್ಥಿಕ ವ್ಯವಸ್ಥೆ ಗಣನೀಯವಾಗಿ ಕುಂಠಿತಗೊಂಡಿದೆ. ಈ ಎಲ್ಲ ಅಂಶಗಳು ಚಿನ್ನದ ಬೆಲೆಯನ್ನು ಗಗನಕ್ಕೇರಿಸಿದೆ ಎಂಬುದು ಚಿನಿವಾರ ಪೇಟೆಯ ತಜ್ಞರ ಅಭಿಮತ.

ಆರ್ಥಿಕ ಅನಿಶ್ಚಿತತೆ ಮತ್ತು ಹಣದುಬ್ಬರದ ನಡುವೆ ಚಿನ್ನದ ಬೆಲೆ ನಾಗಾಲೋಟದಂತೆ ಏರುತ್ತಿರುವುದು ‘ಚಿನ್ನ ಚಿನ್ನ ಆಸೆ..’ ನೆನಪಿಸಿಕೊಳ್ಳಬೇಕಾಗಿದೆ. ಹಾಡುತ್ತಾ ಕೂರುವುದರ ಜೊತೆಗೆ ‘ಉಳ್ಳವರು ಶಿವಾಲಯ ಮಾಡುವರು, ನಾನೇನು ಮಾಡಲಿ ಬಡವನಯ್ಯಾ..’ ಎಂಬ ವಚನ ಹಾಡಬೇಕಾಗಿದೆ.